ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE

# ಎಫ್‌ಡಿಎ ಅಭ್ಯರ್ಥಿಗಳಿಗೆ ಕೃಪಾಂಕಗಳ ಸುರಿಮಳೆ

ರಮೇಶ್ ಮೈಸೂರು ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗವು ಫೆ.28 ರಂದು ನಡೆಸಿದ್ದ ಸಹಾಯಕರು/ ಪ್ರಥಮ ದರ್ಜೆ ಸಹಾಯಕರು ಗ್ರೂಪ್ ಸಿ ಹುದ್ದೆಗಳ ನೇಮಕಾತಿ ಪರೀಕ್ಷೆಯ ಪರಿಷ್ಕೃತ ಸರಿಯುತ್ತರಗಳನ್ನು ಪ್ರಕಟಿಸಿದ್ದು, ಕೃಪಾಂಕಗಳ ಸುರಿಮಳೆಗೈದಿದೆ.

ಸಾಮಾನ್ಯ ಕನ್ನಡ ಪತ್ರಿಕೆ-IIಗೆ ಬರೋಬ್ಬರಿ ಆರು ಪ್ರಶ್ನೆಗಳಿಗೆ ಕೃಪಾಂಕಗಳನ್ನು ನೀಡಿದೆ. ಮೂರು ಪ್ರಶ್ನೆಗಳ ತಾತ್ಕಾಲಿಕ ಸರಿಯುತ್ತರಗಳಲ್ಲಿ ಮಾರ್ಪಾಡು ಮಾಡಲಾಗಿದೆ. ಆರು ಪ್ರಶ್ನೆಗಳಿಗೆ ಎರಡೆರಡು ಸರಿಯುತ್ತರಗಳನ್ನು ಪರಿಗಣಿಸಿದೆ. ಸಾಮಾನ್ಯ ಇಂಗ್ಲಿಷ್ ಪತ್ರಿಕೆ- II ಪತ್ರಿಕೆಯಲ್ಲಿ ಒಟ್ಟು 9 ಪ್ರಶ್ನೆಗಳಿಗೆ ಎರಡು ಆಯ್ಕೆಗಳನ್ನು ಸರಿಯುತ್ತರಗಳೆಂದು ತಿಳಿಸಿದೆ. ಒಂದು ತಾತ್ಕಾಲಿಕ ಉತ್ತರ ಬದಲಾಗಿದ್ದು, ಇಲ್ಲಿಯೂ ಒಂದು ಪ್ರಶ್ನೆಗೆ ಕೃಪಾಂಕ ನೀಡಲಾಗಿದೆ.

ಸಾಮಾನ್ಯ ಜ್ಞಾನ ಪತ್ರಿಕೆ- IIIರಲ್ಲಿ ಎ ಶ್ರೇಣಿಯ 33ನೇ ಪ್ರಶ್ನೆಗೆ 1, 2, ಹಾಗೂ 3 ಆಯ್ಕೆಯನ್ನು ಸರಿಯುತ್ತರ ಎಂದು ತಿಳಿಸಲಾಗಿದೆ. ಅಲ್ಲಿಗೆ ಒಂದೇ ಪ್ರಶ್ನೆಗೆ ಮೂರು ಸರಿಯುತ್ತರಗಳನ್ನು ನೀಡಿದಂತಾಗಿದೆ.



ಇದು ಬಿ, ಸಿ ಹಾಗೂ ಡಿ ಶ್ರೇಣಿಯಲ್ಲಿನ ಪ್ರಶ್ನೆಗೂ ಅನ್ವಯವಾಗಲಿದೆ. 16, 93, 67 ಪ್ರಶ್ನೆಗೆ ತಲಾ ಮೂರು ಆಯ್ಕೆಗಳು ಸರಿಯುತ್ತರವಾಗಿವೆ. ಎ ಶ್ರೇಣಿಯಲ್ಲಿ 87ನೇ ಪ್ರಶ್ನೆಗೆ 1 ಮತ್ತು 3ನೇ ಆಯ್ಕೆಯನ್ನು ಸರಿ ಎಂದು ಘೋಷಿಸಲಾಗಿದೆ. 52ನೇ ಪ್ರಶ್ನೆಯ ತಾತ್ಕಾಲಿಕ ಸರಿಯುತ್ತರ ಬದಲಾಗಿದೆ. ಜತೆಗೆ, 59ನೇ ಪ್ರಶ್ನೆಗೆ ಕೃಪಾಂಕ ನೀಡಲಾಗಿದೆ. ಇದರಂತೆ, ಬಿ, ಸಿ, ಡಿ ಶ್ರೇಣಿಗೂ ಒಂದೊಂದು ಕೃಪಾಂಕ ನಿಡಲಾಗಿದೆ. ಒಂದು ಪ್ರಶ್ನೆಯ ಉತ್ತರ ಬದಲಾಗಿದ್ದು, ಇನ್ನೊಂದು ಪ್ರಶ್ನೆಗೆ ಎರಡೆರಡು ಆಯ್ಕೆ ಸರಿ ಎಂದು ಪ್ರಕಟಿಸಲಾಗಿದೆ.

## ಪರಿಷ್ಕೃತ ಉತ್ತರಗಳೂ ತಪ್ಪು, ಅನ್ಯಾಯ ಆತಂಕ

ಬೆಂಗಳೂರು: ಕೆಪಿಎಸ್‌ಸಿ ಏ.8ರಂದು ಪ್ರಕಟಿಸಿರುವ ಎಫ್‌ಡಿಎ ಗ್ರೂಪ್ ಸಿ ಹುದ್ದೆಗಳ ಅಂತಿಮ ಕೀ-ಉತ್ತರಗಳಲ್ಲಿ ಹಲವು ತಪ್ಪುಗಳಿದ್ದು, ಇದರಿಂದ ಅರ್ಹರಿಗೆ ಅನ್ಯಾಯವಾಗಲಿದೆ ಎಂದು ಅಭ್ಯರ್ಥಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಕೆಪಿಎಸ್‌ಸಿ ಕಾರ್ಯದರ್ಶಿಗೆ ಶುಕ್ರವಾರ ಮನವಿಪತ್ರ ಸಲ್ಲಿಸಿರುವ ಆಕಾಂಕ್ಷಿಗಳು, ಅಂತಿಮ ಕೀ-ಉತ್ತರದಲ್ಲಿರುವ ತಪ್ಪುಗಳ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ. ಸಾಮಾನ್ಯ ಜ್ಞಾನದ 4, ಕನ್ನಡದ 15 ಹಾಗೂ ಇಂಗ್ಲಿಷ್‌ನ 11 ಉತ್ತರಗಳನ್ನು ಪರಿಷ್ಕರಿಸಿ ಏ.8ರಂದು ಅಂತಿಮ ಕೀ-ಉತ್ತರಗಳನ್ನು ಕೆಪಿಎಸ್‌ಸಿ ಪ್ರಕಟಿಸಿತ್ತು. ಆದರೆ, ಅದರಲ್ಲೂ ಅನೇಕ ತಪ್ಪುಗಳಿವೆ. ಕನ್ನಡ ಹಾಗೂ ಸಾಮಾನ್ಯ ಜ್ಞಾನ ವಿಷಯಗಳಲ್ಲೇ ಅಂದಾಜು 8 ಸುಲಭವಾಗಿರುವ ಪ್ರಶ್ನೆಗಳಿಗೇ ತಪ್ಪು ಉತ್ತರ ನೀಡಲಾಗಿದೆ ಎಂದು ಅಭ್ಯರ್ಥಿಗಳು ಆರೋಪಿಸಿದ್ದಾರೆ. ತಪ್ಪು ಉತ್ತರಗಳು ಹಾಗೂ ಅವಶ್ಯಕವಲ್ಲದ ಪ್ರಶ್ನೆಗಳಿಗೆ ಗ್ರೇಸ್ ಅಂಕಗಳನ್ನು ನೀಡಿರುವುದರಿಂದ ಅರ್ಹ ಅಭ್ಯರ್ಥಿಗಳಿಗೆ ಅನ್ಯಾಯವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

> ಪರಿಷ್ಕೃತ ಉತ್ತರಗಳಲ್ಲೂ ಅನೇಕ ತಪ್ಪು, ಗೊಂದಲಗಳಿವೆ. ಆದರೆ, ಇವುಗಳಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ಇಲ್ಲ. ಈ ಕುರಿತು ಆಯೋಗ ಶೀಘ್ರ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳದಿದ್ದರೆ, ಸಾವಿರಾರು ಆಕಾಂಕ್ಷಿಗಳ ಭವಿಷ್ಯಕ್ಕೆ ತೊಂದರೆಯಾಗಲಿದೆ.